# ST FRANCIS DE SALES COLLEGE

Permanently Affiliated to Bangalore University || AICTE Approved Electronic City, Bengaluru - 100

Reaccredited by NAAC with 'B++' Grade || Recognised under section 2(f) & 12(b) of the UGC Act || An ISO 9001: 2015 Certified Institution

A FRANSALIAN INSTITUTE OF HIGHER LEARNING

## DEPARTMENT OF KANNADA

PRESENTS

# ಕನ್ನಡ ರಾಜ್ಯೋತ್ಸವ

(KANNADA RAJYOTSAVA)

**DATE**
27/11/2021

**TIME**
11 AM - 3:30 PM

**VENUE**
NEW AUDITORIUM

**RESOURCE PERSON**
DR.N R LALITHAMBA

## REPORT OF KANNADOTHSAVA AND CULTURAL EVENTS

| | |
|---|---|
| **Title** | Kannada Rajyosthava |
| **Date** | 27.11.2021 |
| **Timing** | 11:00pm To 3:30pm |
| **Department And Associtation** | Kannada Department And Kannada Association |
| **Place** | New Auditorium |
| **Participants** | III$^{rd}$ Semester BCOM, BBA, BSC, BCA, BA Students |

| | |
|---|---|
| **Resource Person(S) With Qualification** | Dr. N R Lalithamba<br>MA Phd<br>Kadamaba Rangayya (Famous Singer), Sa Re Ga Ma Pa Season 17 Runner Up |
| **Famous Books**<br><br>**(If Published)** | • Arasikere Talukina Shasanagalu Samskruthika Adhyana<br>• Kannada Sahitya Samskruthi Kurithu 35 Samshodanagalu Prabandha 25 Sahithyaka Lekanagala Prakatane<br>• Rajyamattadha Matthu Rashtriyamattadha Vichara Sankhyenindha Galalli Sampulana Vyakthigalagi Bhagavahisiddare. |



On the occasion of Kannada Rajyotsava, the program "Kannadotsav-2021" was organized on 27-11-2021 by the Kannada Department of St. Francis de Sales College and the Kannada Association. The following cultural competitions were organized for the students on the occasion of this function. Off Stage Competitions Debate Competition, Speech Competition, Pencil Sketching, Essay Competition, On Stage Competitions: Singing Competition, Group Singing Competition, and Group Dance Competition.


The detailed information is given below in Kannada.


PRINCIPAL
St. Francis de Sales College
Electronics City Post, Bangalore - 560 100.

**<u>ದಿನಾಂಕ 25 -11- 2021 ರಂದು ಆಫ್ ಸ್ಟೇಜ್ ಸ್ಪರ್ಧೆಗಳನ್ನು ನಡೆಸಲಾಯಿತು:</u>**

- **<u>ಚರ್ಚಾ ಸ್ಪರ್ಧೆ :</u>** ಈ ಸ್ಪರ್ಧೆಯಲ್ಲಿ "**ಹಳ್ಳಿ ಸಂಸ್ಕೃತಿ ಅಥವಾ ನಗರ ಸಂಸ್ಕೃತಿ** " ಎಂಬ ವಿಷಯವನ್ನು ನೀಡಲಾಗಿತ್ತು. ಪರ-ವಿರೋಧಗಳ ಚಟಾಪಟಿ, ಮಾತುಗಾರಿಕೆ ಜೋರಾಗಿ ನಡೆಯಿತು. ಹಳ್ಳಿ ಸೊಗಡಿನ ಜೊತೆಗೆ ಸಂಸ್ಕೃತಿಯ ತೊಟ್ಟಿಲುಗಳನ್ನು ಕಾಪಾಡಿಕೊಂಡು ಬರಬೇಕಾದ ಜವಾಬ್ದಾರಿ ಯುವಪೀಳಿಗೆಯದ್ದು ಎಂಬುದು ಒಂದು ಗುಂಪಿನ ವಾದವಾದರೆ, ಪ್ರಸ್ತುತ ಡಿಜಿಟಲ್ ಪ್ರಪಂಚಕ್ಕೆ ಅನುಗುಣವಾಗಿ ನಗರಗಳು ತನ್ನ ವಿಸ್ತಾರವನ್ನು ಹಬ್ಬಿಸುತ್ತಿದೆ. ಪ್ರತಿಕ್ಷಣ ಸಂಚಲನ ಸೃಷ್ಟಿಸುತ್ತಿರುವ 21ನೇ ಶತಮಾನವು ನಗರಗಳ ವ್ಯಾಮೋಹ, ಸಿಟಿ ಲೈಫ್ ಸ್ಟೈಲ್ ಗಳು ಇವತ್ತಿನ ಯುವಪೀಳಿಗೆಯನ್ನು ಆಕರ್ಷಿಸುತ್ತಿರುವುದುರ ಜೊತೆಗೆ ನಗರ ಸಂಸ್ಕೃತಿಗಳು ನಮಗೆ ಬೇಕೇ ಬೇಕು ಎಂದು ತಮ್ಮ ವಾದಗಳನ್ನು ಮಂಡಿಸಿದರು. **ಪ್ರೊ. ಕುಮಾರ ಸಿ ರವರು,** ಈ ಸ್ಪರ್ಧೆಯ ಮುಖ್ಯಪಾತ್ರವನ್ನು ನಿಭಾಯಿಸಿ ಯಶಸ್ಸಿಗೆ ಕಾರಣರಾದರು.








FRANCIS DE SALES COLLEGE

- <u>ಪ್ರಬಂಧ ಸ್ಪರ್ಧೆ :</u> **'ಕರ್ನಾಟಕದಲ್ಲಿರುವ ಅನ್ಯ ಭಾಷಿಕರಿಗೆ ಕನ್ನಡ ಭಾಷೆಯ ಅಗತ್ಯತೆ** ಎಂಬ ವಿಷಯವನ್ನು ಕುರಿತು ಪ್ರಬಂಧ ಸ್ಪರ್ಧೆಯನ್ನು ನಡೆಸಲಾಯಿತು. ಒಂದು ಗಂಟೆಗಳ ಕಾಲಾವಕಾಶದಲ್ಲಿ ನಡೆದ ಈ ಸ್ಪರ್ಧೆಯಲ್ಲಿ, ಸುಮಾರು 35 ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ತಮ್ಮ ಅನಿಸಿಕೆಗಳನ್ನು ಬರೆದರು. **ಪ್ರೊ. ಕಿಟ್ಟಪ್ಪ ರವರು** ಈ ಸ್ಪರ್ಧೆಯಲ್ಲಿ ಮುಖ್ಯ ಪಾತ್ರವನ್ನು ನಿಭಾಯಿಸಿ ಸ್ಪರ್ಧೆ ಸಂಪೂರ್ಣವಾಗಿ ಯಶಸ್ವಿಯಾಗಲು ಕಾರಣರಾದರು.






-


FRANCIS DE SALES COLLEGE


- **ಪೆನ್ಸಿಲ್ ಸ್ಕೆಚಿಂಗ್ :** ಈ ಸ್ಪರ್ಧೆಯು ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರಹಾಕುವ ಸೃಜನಶೀಲ ಕಲೆಯಾಗಿತ್ತು. '**ಕನ್ನಡ ಕವಿಗಳ ಚಿತ್ರಪಟ**' ಗಳನ್ನು ಬಿಡಿಸುವ ಸ್ಪರ್ಧೆ ಇದಾಗಿತ್ತು. ಸುಮಾರು 15 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ಕವಿಗಳ ಚಿತ್ರಪಟ ಬಿಡಿಸುವಲ್ಲಿ ಉತ್ಸುಕರಾಗಿದ್ದರು. ಈ ಸ್ಪರ್ಧೆಯ ಮೂಲಕ ವಿದ್ಯಾರ್ಥಿಗಳ ಕಲೆಯನ್ನು ಪ್ರೋತ್ಸಾಹಿಸುವಂತೆ ಆಯಿತು. **ಡಾ. ಪ್ರಕಾಶ ರಂಜೇರೆ** ರವರ ನೇತೃತ್ವದಲ್ಲಿ ಈ ಸ್ಪರ್ಧೆಯು ಸಂಪೂರ್ಣ ಯಶಸ್ವಿ ಪಡೆಯಿತು.








- <u>**ಭಾಷಣ ಸ್ಪರ್ಧೆ**</u>: ಈ ಸ್ಪರ್ಧೆಯು '**ಕನ್ನಡ ಸಾಧಕ**' ರನ್ನು ಕುರಿತು ಐದು ನಿಮಿಷಗಳ ಕಾಲ ಯಾವುದೇ ತಡೆ ಗಳಿಲ್ಲದೆ ಸುಲಲಿತವಾಗಿ, ನಿರರ್ಗಳವಾಗಿ ಮಾತನಾಡುವ ಸ್ಪರ್ಧೆಯಾಗಿತ್ತು. ಸುಮಾರು 15 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ನಾಡಿನ ಸಾಧಕರು ವಿವಿಧ, ವಿಶಿಷ್ಟ, ವಿಚಾರಗಳನ್ನು ಸ್ಪುಟವಾಗಿ ಮಾತನಾಡುವ ಮೂಲಕ ಅನೇಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕರುನಾಡ ಸಾಧಕರನ್ನು ತಿಳಿಯಲು ಸಹಕಾರಿಯಾಯಿತು. **ಪ್ರೊ. ಕರಿಬಸವನಗೌಡ** ರವರು ಈ ಸ್ಪರ್ಧೆಯ ಒಟ್ಟಾರೆ ಜವಾಬ್ದಾರಿಯನ್ನು ನಿರ್ವಹಿಸಿದ್ದು ಯಶಸ್ಸಿಗೆ ಕಾರಣರಾದರು.








...NCIS DE SALES COLLEGE
Bengaluru - 100.

**ಈ ಮೇಲಿನ ಎಲ್ಲಾ ಸ್ಪರ್ಧೆಗಳ ವಿಜೇತರಿಗೆ 27- 11- 2021ರ 'ಕನ್ನಡೋತ್ಸವ' ಸಮಾರಂಭದ ವೇಳೆಯಲ್ಲಿ ಬಹುಮಾನಗಳನ್ನು ಹಾಗೂ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು.**

**<u>ದಿನಾಂಕ 27 -11- 2021 ರಂದು ಆಫ್ ಸ್ಟೇಜ್ ಸ್ಪರ್ಧೆಗಳನ್ನು ನಡೆಸಲಾಯಿತು:</u>**

- **ಗಾಯನ ಸ್ಪರ್ಧೆ** : ಈ ಸ್ಪರ್ಧೆಯು 'ಕನ್ನಡೋತ್ಸವ' - 2021 ರ ಸಂಭ್ರಮದ ಆಚರಣೆಯ ಸಮಯದಲ್ಲಿ ನಡೆಸಲಾಯಿತು. ಸುಮಾರು ಹತ್ತಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ತೀರ್ಪುಗಾರರನ್ನು ಒಳಗೊಂಡಿದ್ದ ಈ ಸ್ಪರ್ಧೆಯು **ಜಾನಪದ ಗೀತೆ, ಭಾವಗೀತೆ, ಕನ್ನಡ ನಾಡು ನುಡಿಗೆ ಸಂಬಂಧಿಸಿದ ಗೀತೆ**ಗಳನ್ನು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗನ್ನು ತಂದುಕೊಟ್ಟಿತು.


- **ಸಮೂಹ ಗಾಯನ ಸ್ಪರ್ಧೆ:** ಆರು ತಂಡಗಳನ್ನು ಒಳಗೊಂಡ ಈ ಸ್ಪರ್ಧೆಯು ನೆರೆದಿರುವ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಸಂಭ್ರಮವನ್ನು ತುಂಬಲು ಕಾರಣವಾಯಿತು. ಒಂದಷ್ಟು ವಾದ್ಯಗಳನ್ನು ಬಳಸಿ **ಜನಪದ ಗೀತೆಗಳು, ಭಾವಗೀತೆಗಳು, ಹಾಗೂ ಕನ್ನಡ ನಾಡು ನುಡಿಗೆ ಸಂಬಂಧಿಸಿದ ಗೀತೆ**ಗಳನ್ನು ಹಾಡುವ ಮೂಲಕ ಭಾಷಾ ಅಭಿಮಾನವು ಇಮ್ಮಡಿಗೊಳಿಸಲು ಕಾರಣವಾಯಿತು. ತೀರ್ಪುಗಾರರ ನಿರ್ಧಾರವನ್ನು ಅಂತಿಮ ನಿರ್ಧಾರವಾಗಿ ಪರಿಗಣಿಸಲಾಯಿತು.

- **ಸಮೂಹ ನೃತ್ಯ ಸ್ಪರ್ಧೆ :** ವಿದ್ಯಾರ್ಥಿಗಳು ಹಾಗೂ ನೆರೆದಿರುವ ಎಲ್ಲರೂ ಹೆಚ್ಚು ಕಾತರದಿಂದ ಕಾದಂತಹ ಸ್ಪರ್ಧೆಗಳಲ್ಲಿ ಇದೂ ಒಂದು. ಈ ಸ್ಪರ್ಧೆಯು 14 ತಂಡಗಳನ್ನು ಒಳಗೊಂಡಿತ್ತು. ವಿಭಿನ್ನ ರೀತಿಯಲ್ಲಿ, ವಿಭಿನ್ನ ಶೈಲಿಯಲ್ಲಿ ತಮ್ಮ ನೃತ್ಯ ಪ್ರದರ್ಶಿಸುವ ಮೂಲಕ ವೇದಿಕೆಯನ್ನು ಮತ್ತಷ್ಟು ರಂಗುಗೊಳಿಸಿದರು. **ಜಾನಪದ ನೃತ್ಯ, ಯಕ್ಷಗಾನ ನೃತ್ಯ, ಕನ್ನಡ ಭಾಷಾಭಿಮಾನದ ನೃತ್ಯಗಳು, ಹಳದಿ - ಕೆಂಪು ವಸ್ತ್ರಾಭರಣ** ದೊಂದಿಗೆ ಎಲ್ಲೆಲ್ಲೂ ಕನ್ನಡ ಹಬ್ಬದ ಆಚರಣೆಯ ವಾತಾವರಣವು ಕಂಡಿತು. ತೀರ್ಪುಗಾರರನ್ನು ಒಳಗೊಂಡಿದ್ದ ಈ ಸ್ಪರ್ಧೆಯು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.

- **ಎಲ್ಲಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪ್ರಮಾಣಪತ್ರಗಳನ್ನು ನೀಡಿ ಅಭಿನಂದಿಸಲಾಯಿತು.**

ST. FRANCIS DE SALES COLLEGE
Bengaluru







ST. FRANCIS DE SALES COLLEGE
Bengaluru

# <u>ಕನ್ನಡೋತ್ಸವ-2021</u>

**ದಿನಾಂಕ, 27 -11 -2021** ರಂದು ಕಾಲೇಜಿನ '**ನೂತನ ಸಭಾಂಗಣ**' ದಲ್ಲಿ **"ಕನ್ನಡೋತ್ಸವ - 2021"** ರ ಸಂಭ್ರಮವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಹೆಸರಾಂತ ಸಾಹಿತಿಗಳಾದ **ಡಾ.ಎನ್. ಆರ್. 'ಲಲಿತಾಂಬ'** ಸಹಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮದ ಗೌರವಾನ್ವಿತ ಅತಿಥಿಗಳಾಗಿ ಹೆಸರಂತ ಗಾಯಕರು, ಸರಿಗಮಪ ಸೀಸನ್ 17 ರ ದ್ವಿತೀಯ ವಿಜೇತರಾದ **'ಶ್ರೀಯುತ ಕಂಬದ ರಂಗಯ್ಯ'** ನವರು ಆಗಮಿಸಿದ್ದರು. ಕಾರ್ಯಕ್ರಮದ 'ಅಧ್ಯಕ್ಷತೆ' ಯನ್ನು ನಮ್ಮ ಕಾಲೇಜಿನ ಉಪಪ್ರಾಂಶುಪಾಲರಾದ **'ಫಾದರ್ ಜೀಜ್ಹೋ ಜೋಸ್'** ಅವರು ವಹಿಸಿಕೊಂಡಿದ್ದರು. ಕನ್ನಡ ವಿಭಾಗದ **ಮುಖ್ಯಸ್ಥರಾದ ಡಾ. ಶಾಂತರಾಜು** ರವರು ಹಾಗೂ **ಸಂಯೋಜಕರಾದ ಪ್ರೊ. ವೀಣಾ** ರವರು ವೇದಿಕೆಯ ಮೇಲೆ ಆಸೀನರಾಗಿದ್ದರು. ಪ್ರಾರ್ಥನಾ ಗೀತೆ ಮೂಲಕ ಪ್ರಾರಂಭವಾದ ಈ ಕಾರ್ಯಕ್ರಮ ಕನ್ನಡದ ದೀಪವನ್ನು ಬೆಳಗುವುದರ ಮೂಲಕ, ತಾಯಿ **'ಭುವನೇಶ್ವರಿ'** ದೇವಿಗೆ ಪುಷ್ಪಾರ್ಚನೆಯನ್ನೂ ಸಲ್ಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಹಚ್ಚೇವು ಕನ್ನಡದ ದೀಪ ಎಂಬ ಸ್ವಾಗತ ನೃತ್ಯವು ಕನ್ನಡದ ಸಂಭ್ರಮಕ್ಕೆ ಮತ್ತಷ್ಟು ಬಣ್ಣವನ್ನು ತುಂಬಿತು. ಮೊದಲಿಗೆ ವಿಭಾಗದ ಮುಖ್ಯಸ್ಥರಾದ ಡಾ. ಶಾಂತರಾಜು ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. **"ಕನ್ನಡ ನಾಡು, ನುಡಿ, ಸಂಸ್ಕೃತಿಯ ಕಾಪಾಡುವ ಯುವಪೀಳಿಗೆಯ ಪಾತ್ರ ಮತ್ತು ಜವಾಬ್ದಾರಿ"**ಯನ್ನು ಕುರಿತು ಮುಖ್ಯ ಅತಿಥಿಗಳಾದ ಡಾ. ಲಲಿತಾಂಬಾ ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹಿತ ನುಡಿಗಳನ್ನಾಡಿದರು. ಗೌರವಾನ್ವಿತ ಅತಿಥಿಗಳಾದ 'ಶ್ರೀಯುತ ಕಂಬದರಂಗಯ್ಯ' ನವರು ಒಂದಷ್ಟು ಕನ್ನಡದ ಹಾಡುಗಳನ್ನು ಹಾಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಉತ್ಸಾಹವನ್ನು ತುಂಬಿದರು. ಕಾಲೇಜಿನ ಉಪಪ್ರಾಂಶುಪಾಲರಾದ ಫಾ. ಜಿಜೋ ಜೋಸ್ ರವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಈ ಕಾರ್ಯಕ್ರಮದ ಒಟ್ಟಾರೆ ನಿರೂಪಣೆಯ ಜವಾಬ್ದಾರಿಯನ್ನು ಬಿಬಿಎ ವಿದ್ಯಾರ್ಥಿಯಾದ **ಚಂದನ ಹಾಗೂ ಹರ್ಷಿತ್** ನಿರ್ವಹಿಸಿದರು. ವಿದ್ಯಾರ್ಥಿನಿ **ಪ್ರಿಯಾ,** ನೆರೆದಿರುವವರಿಗೆ ಹಾಗೂ ಅತಿಥಿಗಳಿಗೆ ಸ್ವಾಗತವನ್ನು ಕೋರಿದರೆ, ವಿದ್ಯಾರ್ಥಿನಿ **ಸುಶ್ಮಿತಾ ಮತ್ತು ವಸುಧ** ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. **ಡಾ. ಪ್ರಕಾಶ ರಂಜೇರೆ** ರವರು ಬಹುಮಾನ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿನಿ **ಚಿನ್ನಮ್ಮ ಬುದ್ನಿ** ವಂದನಾರ್ಪಣೆ ಸಲ್ಲಿಸಿದರು. ಕನ್ನಡ ವಿಭಾಗದ ಎಲ್ಲಾ ಪ್ರಾಧ್ಯಾಪಕರು ಹಾಗೂ ಇತರೆ ವಿಭಾಗದ ಪ್ರಾಧ್ಯಾಪಕರು ಬೋಧಕ ಬೋಧಕೇತರ ಸಿಬಂದಿವರ್ಗ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.


ST. FRANCIS DE SALES COLLEGE Bengaluru - 100


## GALLERY












ST. FRANCIS DE SALES COLLEGE
* Bengaluru - 100. *





ST. FRANCIS ... COLLEGE
Bengaluru

## ಸಾಂಸ್ಕೃತಿಕ ಸ್ಪರ್ಧೆಗಳು:











ST. FRANCIS DE SALES COLLEGE
Bengaluru

## ಪುನೀತ್ ನಮನ:

ಕನ್ನಡೋತ್ಸವ -2021 ಸಂಭ್ರಮದ ಆಚರಣೆಯಲ್ಲಿ ಮರಣೋತ್ತರ '**ಕರ್ನಾಟಕ ರತ್ನ**' ಪ್ರಶಸ್ತಿ ಪಡೆದ ದಿವಂಗತರಾದ ನಟ ಪುನೀತ್ ರಾಜಕುಮಾರ್ ರವರಿಗೆ ಭಾವಪೂರ್ಣ ನಮನಗಳನ್ನು ಸಲ್ಲಿಸುವ ಆ ಮೂಲಕ ಗೌರವ ಸಮರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕನ್ನಡ ವಿಭಾಗದ ಸಂಯೋಜಕರಾದ **ಪ್ರೊ. ವೀಣಾ** ರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾಲೇಜಿನ ಪ್ರಾಧ್ಯಾಪಕ ವೃಂದದವರು ಒಂದು ಹಾಡನ್ನು ಸಲ್ಲಿಸುವುದರ ಮೂಲಕ ಅಗಲಿದ ನಾಯಕನಿಗೆ ಭಾವಪೂರ್ಣ ನಮನಗಳನ್ನು ಸಲ್ಲಿಸಿದರು. ನಟ ಪುನೀತ್ ರಾಜಕುಮಾರ್ ರವರ ಚಿತ್ರಪಟಕ್ಕೆ ಪುಷ್ಪಾರ್ಚನೆಯನ್ನೂ ಮಾಡುವುದರ ಮೂಲಕ ಗೌರವವನ್ನು ಸಲ್ಲಿಸಲಾಯಿತು.









**PRINCIPAL**
**St. Francis de Sales College**
Electronics City Post, Bangalore - 560 10...